ದಿನಾಂಕಃ 01.02.2023 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ರಿಂದ 3 , 12 ಮತ್ತು 13 ಪ್ರತಿವಾದಿಪರ ಶ್ರೀ ಕೆಆರ್ ಆರ್ ವಕೀಲರಿಂದಃ

1. ಈ ದಾವೆಯನ್ನು ಯಾರು ತಿಳಿಸಿರುತ್ತಾರೆ ಎಂದರೆ ವೆಂಕಟಮ್ಮರವರು ಅವರ 5 ಜನ ಅಣ್ಣತಮ್ಮಂದಿರ ವಿರುದ್ಧ ಸಲ್ಲಿಸಿರುತ್ತಾರೆ . ಈ ದಾವೆಯಲ್ಲಿ ಎಷ್ಟು ಜನ ಪ್ರತಿವಾದಿಗಳು ಇರುತ್ತಾರೆ ಎಂದರೆ ಗೊತ್ತಿಲ್ಲ. ವಾದಿ ಎಷ್ಟು ಸ್ವತ್ತುಗಳ ವಿರುದ್ಧ ದಾವೆ ಸಲ್ಲಿಸಿರುತ್ತಾರೆ ಎಂದರೆ ಎರಡು ಮನೆ ಮತ್ತು 9 ಸರ್ವೆ ನಂಬರ್ ಗಳ ವಿರುದ್ಧ . ಸದರಿ ಆಸ್ತಿಗಳು ಮೂಲತಃ ಯಾರು ಸಂಪಾದನೆ ಮಾಡಿರುತ್ತಾರೆ ಎಂದರೆ ವೆಂಕಟರೆಡ್ಡಿರವರ ತಾತ. ಸದರಿ ತಾತನವರು ಹೆಸರು ಗೊತ್ತಿರುವುದಿಲ್ಲ. ವೆಂಕಟರೆಡ್ಡಿರವರ ತಾತನಿಗೆ ಎಷ್ಟು ಜನ ಮಕ್ಕಳು ಎಂದರೆ ಗೊತ್ತಿಲ್ಲ. ವಾದಿಗಳು ಯಾರ ವಂಶಸ್ಥರು ಎಂದರೆ ಗಂಗುಲ ರೆಡ್ಡಿ . ಪ್ರತಿವಾದಿಗಳು ಯಾರ ವಂಶಸ್ಥರು ಎಂದರೆ ವೆಂಕಟರೆಡ್ಡಿ . 6 ನೇ ಪ್ರತಿವಾದಿ ಯಾರು ಎಂದರೆ ಗೊತ್ತಿಲ್ಲ. 6 ನೇ ಪ್ರತಿವಾದಿ ಗಂಡ ನಾರಾಯಣರೆಡ್ಡಿ ಗೋತ್ತಾ ಎಂದರೆ ಗೊತ್ತು ಅವರು ಈಗ ಜೀವಂತವಾಗಿ ಇರುತ್ತಾರೆ. ಕೃಷ್ಣ ರೆಡ್ಡಿ ಗೊತ್ತಾ ಎಂದರೆ ಗೊತ್ತಿರುವುದಿಲ್ಲ. 11 ನೇ ಪ್ರತಿವಾದಿ ಗಂಡನಿಗೆ ಎಷ್ಟು ಜನ ಮಕ್ಕಳು ಎಂದರೆ ನಾಲ್ಕು ಜನ. ಅವರ ಹೆಸರು ಎನು ಎಂದರೆ ಹರಿನಾಥ ರೆಡ್ಡಿ , ಶಿವಾ ರೆಡ್ಡಿ ಉಳಿದವರ ಹೆಸರು ಗೊತ್ತಿರುವುದಿಲ್ಲ. ದಾವಾ ಆಸಿತಯ ಸರ್ವೆ ನಂಬರಿ , ವಿಸ್ತಿರ್ಣ ಮತ್ತು ಚೆಕ್ಕುಬಂದಿ ಹೇಳಲು ಆಗುತ್ತದೆಯೇ ಎಂದರೆ

2

ಇಲ್ಲ. ದಾವಾ ಆಸ್ತಿಯ ಮನಗೆಳಲ್ಲಿ ಯಾರು ವಾಸ ಇದ್ದಾರೆ ಎಂದರೆ ಒಂದನೇ

ಪ್ರತಿವಾದಿ ಒಂದು ಮನೆಯಲ್ಲಿ ಹಾಗೂ ಚಂಗಾರೆಡ್ಡಿರವರ ಮಗ ಇನ್ನೊಂದು ಮನೆಯಲ್ಲಿ ವಾಸ ಇರುತ್ತಾರೆ . ವಾದಿಯರು ಯಾವ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಅವರ ಸ್ವಂತ ಬೇರೆ ಮನೆಯಲ್ಲಿ ವಾಸ ಇರುತ್ತಾರೆ . 6 ರಿಂದ 10 ನೇ ಪ್ರತಿವಾದಿ ಎಲ್ಲಿ ವಾಸ ಇರುತ್ತಾರೆ ಎಂದರೆ ಅವರೂ ಸಹ ಬೇರೆ ಮನೆಯಲ್ಲಿ ವಾಸ ಇದ್ದಾರೆ . 11 ರಿಂದದ 13 ನೇ ಪ್ರತಿವಾದಿ ಎಲ್ಲಿ ವಾಸ ಇರುತ್ತಾರೆ ಎಂದರೆ ಅವರೂ ಸಹ ಬೇರೆ ಮನೆಯಲ್ಲಿ ವಾಸ ಇರುತ್ತಾರೆ. ಹಾಗಾದರೆ ಇವರ ಕುಟುಂಬಕ್ಕೆ ಒಟ್ಟು ಎಷ್ಟು ಮನೆ ಇರುತ್ತದೆ ಎಂದರೆ ನಾಲ್ಕು ಮನೆ . ಹಾಗಾದರೆ ದಾವಾ ಆಸ್ತಿಯಲ್ಲಿ ಉಳಿದ ಎರಡು ಮನೆ ಸೇರಿಸಿರುವುದಿಲ್ಲ ಎಂದರೆ ಹೌದು . ದಾವಾ ಆಸ್ತಿ ಹೊರತುಪಡಿಸಿ ಬೇರೆ ಆಸ್ತಿ ಇದೆಯೇ ಎಂದರೆ ಗೊತ್ತಿಲ್ಲ.

2. ಯಾವ ದಾವಾ ಆಸ್ತಿಯ ಪಕ್ಕದಲ್ಲಿ ನಿಮ್ಮ ಆಸ್ತಿ ಇದೆ ಎಂದರೆ ಐಟಂ ನಂ. 3 ರ ಜಮೀನಿನ ಪೂರ್ವಕ್ಕೆ ನನ್ನ ಜಮೀನು ಇದೆ. ಸಾಕ್ಷಿ ಮುಂದುವರೆದು ಐಟಂ ನಂ. 3 ರ ಪಕ್ಕ ಅಶೋಕ್ ರೆಡ್ಡಿ ಜಮೀನು ಅದ ನಂತರ ನನ್ನ ಜಮೀನು ಇದೆ ಎಂದು ನುಡಿಯುತ್ತಾರೆ . ನಿಮ್ಮ ಜಮೀನು ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ನನ್ನ ತಾಯಿ ಮಂಗಮ್ಮರವರ ಹೆಸರಿನಲ್ಲಿ ಮೂರು ಎಕರೆ ಇರುತ್ತದೆ. ನಿಮ್ಮ ಜಮೀನಿನ ಚೆಕ್ಕುಬಂದಿ ಎನು ಎಂದರೆ ಪೂರ್ವಕ್ಕೆ

ಬೆಟ್ಟಪ್ಪರವರ ಜಮೀನು ಪಶ್ಚಿಮಕ್ಕೆ ಸಹ್ಯಾದ್ರಿ ರವರ ಜಮೀನು ಉತ್ತರಕ್ಕೆ ಈರಮ್ಮರವರ ಜಮೀನು ದಕ್ಷಿಣಕ್ಕೆ ಈರಮ್ಮರವರ ಜಮೀನು. ದಾವಾ

6

ಆಸ್ತಿಯ ಅಕ್ಕಪಕ್ಕದಲ್ಲಿ ನನ್ನ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು 30 ವರ್ಷಗಳ ಹಿಂದೆ ವಿಭಾಗ ಆಗಿ ಬೇರೆ ಬೇರೆ ವಾಸ ಇರುತ್ತಾರೆ ಎಂದರೆ ಸರಿಯಲ್ಲ. 30 ವರ್ಷಗಳಿಂದ ವಾದಿ ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇರುವುದಿಲ್ಲ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ.,ಮುಳಬಾಗಿಲು.